

ಆಗ್ನೇಯ ಏಷಿಯಾದ ಅತಿ ದೊಡ್ಡ ಮೆಗಲಿತಿಕ್ ತಾಣ ಗುನುಂಗ್ ಪದಾಂಗ್, ಮೇಲಿನ ಮಾಳಿಗೆಗಳಿಂದ ನೋಡಿದಾಗ




'ಪೆರು' ಪುಸ್ತಕವನ್ನು ಮಾಚುಪಿಚುವಿನ ಎತ್ತರದಲ್ಲಿ ಹಿಡಿದು ಮಲ್ಲಿಕಾರ್ಜುನ ಡಿ.ಜಿ. ಅವರು ತೆಗೆದ ಚಿತ್ರ

'ಬಾಲಿ' ದ್ವೀಪಕ್ಕೆ. ಆದರೆ ಗುನುಂಗ್ ಪದಾಂಗ್ ಇರುವುದು ಇಂಡೊನೇಷಿಯಾದ ಮತ್ತೊಂದು ದ್ವೀಪ ಜಾವಾದಲ್ಲಿ. ಜಾವಾ, ಪಶ್ಚಿಮದಿಂದ ಪೂರ್ವಕ್ಕೆ ಹರಡಿ ನಿಂತ ದ್ವೀಪ. ಮೆಲ್ಲನೆ ನನ್ನೊಳಗೆ ಮತ್ತೊಂದು ಪ್ರವಾಸದ ಕಲ್ಪನೆ ಮೂಡಿತು.

ಬೆಂಗಳೂರಿನಿಂದ ಹೊರಟು ಜಾವಾದ ಪಶ್ಚಿಮ ತುದಿಯ ಜಕಾರ್ತಾದಲ್ಲಿ ಇಳಿಯುವುದು. ಅಲ್ಲಿಂದ ರಸ್ತೆಯ ಮೂಲಕ ಬಸ್ಸೋ, ಕಾರೋ, ರೈಲೋ ಹಿಡಿಯುತ್ತಾ ಗುನುಂಗ್ ಪದಾಂಗ್, ಯೋಗ್ಯಕರ್ತ ಮೂಲಕ ಜಾವಾ ದ್ವೀಪದ ಪೂರ್ವ ತುದಿ ಕೆಟಾಪಾಂಗ್ ತಲುಪುವುದು. ಅಲ್ಲಿ ಫೆರ್ರಿ ಹಿಡಿದು, ಬಾಲಿ ದ್ವೀಪವನ್ನು ಪ್ರವೇಶಿಸುವುದು. ಇಂತಹದೊಂದು ಪಯಣಕ್ಕೆ ಸಂಗಾತಿ ಬೇಕು. ಗೆಳತಿ ಪತ್ರಕರ್ತೆ, ಲೇಖಕಿ ಸಿ.ಜಿ. ಮಂಜುಳಾ ಅವರಿಗೆ ಫೋನ್ ಮಾಡಿದೆ. ಉತ್ಸಾಹದಿಂದ ಜೊತೆಯಾದರು. ನಮ್ಮಿಬ್ಬರಿಗೂ 65ರ ಹರೆಯ. ಬೆಂಗಳೂರಿನಿಂದ ಜಕಾರ್ತಾಕ್ಕೆ ಹೋಗುವ, ಬಾಲಿಯಿಂದ ಬೆಂಗಳೂರಿಗೆ ಹಿಂತಿರುಗುವ ವಿಮಾನದ ಎರಡು ಟಿಕೆಟ್ ಮಾತ್ರ ಕೈಯಲ್ಲಿ ಹಿಡಿದು ಹೊರಟೇಬಿಟ್ಟೆವು, 'ಅಲ್ಲಿ ಹೋಗಿ ವೀಸಾ ಪಡೆದರಾಯಿತು' ಎಂದು. ಸಾವಿರ ಮೈಲಿಗಳನ್ನು ನೆಲದ ಮೇಲೆ ಹೇಗೆ ಅಲೆಯುವೆವೆಂಬ ಕುತೂಹಲ ನಮಗೂ ಇತ್ತು. ನಮ್ಮ ಈ ಪಯಣದ ಮೊದಲ ತಾಣ 'ಗುನುಂಗ್ ಪದಾಂಗ್' ಆಗಿತ್ತು.

ಜಕಾರ್ತಾದಲ್ಲಿ ವಿಮಾನ ಇಳಿದಿತ್ತು, ಟ್ಯಾಕ್ಸಿ ಹಿಡಿದು ಹೋಟೆಲಿಗೆ ಬಂದಿದ್ದೆವು. ನನಗೆ ಮರುದಿನವೇ ಗುನುಂಗ್ ಪದಾಂಗ್‌ಗೆ ಹೊರಟು ಬಿಡುವ ಅವಸರದ ಹುಮ್ಮಸ್ಸು. ಹೋಟೆಲಿನವರನ್ನೇ ಕೇಳಿದೆ – 'ಗುನುಂಗ್ ಪದಾಂಗ್‌ಗೆ ಬಸ್ಸು, ಟ್ಯಾಕ್ಸಿ ಇದೆಯೆ?'. ಅವರು ಮೊದಲಿಗೆ ಆ ಹೆಸರೇ ಕೇಳಿರಲಿಲ್ಲ. ಕೈಯಲ್ಲಿ ಮೊಬೈಲ್ ಇರುವ ಕಾರಣ ವಿವರಿಸುವುದು ಸುಲಭ, ಫೋಟೊ ತೋರಿಸಿದೆ. ಟ್ಯಾಕ್ಸಿ ಬುಕ್ ಮಾಡಲು 'ಆ್ಯಪ್' ಬೇಕಿತ್ತು. ಹೋಟೆಲಿನವ ತನ್ನ ಮೊಬೈಲ್‌ನಲ್ಲಿ ಹುಡುಕುತ್ತಾ 'ಇದೆಂಥಾ ಜಾಗ' ಗೊಣಗಿದ. ಅದಿನ್ನೂ ಪ್ರವಾಸದ ತಾಣವಾಗಿ ಪ್ರಸಿದ್ಧವಾದಂತಿರಲಿಲ್ಲ.

ಈಗ ಅಂದುಕೊಂಡೆ, ಅಸ್ಮಾ ನಾಡಿಯಾ ಏನಾದರೂ ನನ್ನನ್ನು ಭೇಟಿಯಾಗಲು ಇವತ್ತು ಬಂದರೆ, ಆಕೆಯನ್ನು ಕೇಳಬೇಕು. ಇಂಡೊನೇಷಿಯಾಗೆ ಹೊರಟೇ ಬಿಟ್ಟ ಸಮಯದಲ್ಲಿ, ಅಸ್ಮಾ ನೆನಪಾಗಿದ್ದರು. 2006ರಲ್ಲಿ ಕೊರಿಯಾ ದೇಶಕ್ಕೆ ನಾನು ಹೋದ ಸಂದರ್ಭದಲ್ಲಿ ಇಂಡೊನೇಷಿಯಾದ ಲೇಖಕಿ ಅಸ್ಮಾ ನಾಡಿಯಾ ಅವರ ಪರಿಚಯವಾಗಿತ್ತು. ನನ್ನ ಹಳೆಯ ಇ–ಮೇಲ್ ಹುಡುಕಾಡಿ, ಸಂಪರ್ಕಿಸಿದೆ. ಅತ್ತಲಿಂದ ತಕ್ಷಣ ಉತ್ತರವಿತ್ತು. ಜಕಾರ್ತಾದಲ್ಲಿ ನಾವು ಬಂದಿಳಿದ ಸಮಯ ರಂಜಾನ್‌ನ ಉಪವಾಸದ ದಿನಗಳು. ಅಸ್ಮಾ ತಡ ಮಧ್ಯಾಹ್ನ ಹೋಟೆಲಿಗೆ ಬಂದಿಳಿದಾಗ ಸಂಭ್ರಮ. ಇಷ್ಟರಲ್ಲಿ ಭಾಷೆಯ ತೊಂದರೆ ಅಷ್ಟೇ ಅಲ್ಲ, ಎಲ್ಲಕ್ಕೂ ಆ್ಯಪ್ ಮೂಲಕವೇ ಸಂಪರ್ಕಿಸಬೇಕಾದ ಡಿಜಿಟಲ್ ಲೋಕದ ತೊಡಕುಗಳ ಅರಿವಾದ ನಾನು ಆಕೆಯನ್ನು 'ನಿಮ್ಮ ಆ್ಯಪ್‌ನಲ್ಲಿ ನಾಳೆ ನಮಗೆ ಗುನುಂಗ್ ಪದಾಂಗ್‌ಗೆ ಟ್ಯಾಕ್ಸಿ ಮಾಡಲು ಸಾಧ್ಯವೆ? ನಾವು ಕ್ಯಾಷ್ ಪೇ ಮಾಡುತ್ತೇವೆ' ಎಂದು ಕೇಳಿದೆ. ಆಕೆಯಾಗಲಿ, ಅವರ ಪತಿಯಾಗಲೀ ಗುನುಂಗ್ ಪದಾಂಗ್ ಬಗ್ಗೆ ಕೇಳಿರಲಿಲ್ಲ. ವಿವರಿಸಿದೆ, ಅವರಿಗೂ ಕುತೂಹಲ;